# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 4186/2022

ಚಾಸಾ- 9/ **ಪ್ರಾಸಾ ಃ 4**

| | |
|---|---|
| ಹೆಸರು | **ಶರಣಮ್ಮ ಅಡಡಿಯಪ್ಪ ಭಜಂತ್ರಿ** |
| ಗಂಡನ ಹೆಸರು | **ಶಿವಾನಂದ್** |
| ವಯಸ್ಸು | **33** |
| ಉದ್ಯೋಗ | **ಅಬಕಾರಿ ನಿರೀಕ್ಷಕರು, ಬೀದರ್ ವಲಯ** |
| ವಿಳಾಸ | **ಬೀದರ್** |

**ದಿನಾಂಕಃ 04.04.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನಾನು ದಿನಾಂಕಃ 28.06.2019 ರಿಂದ 21.12.2023 ರ ವರೆಗೆ ಮಾಗಡಿ ವಲಯದ ಅಬಕಾರಿ ನಿರೀಕ್ಷಕಳಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕ 12.07.2021 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-6 ರವರಿಂದ ಪಡೆದು ತನಿಖೆ ಮುಂದುವರೆಸಿ ದಿನಾಂಕ 26.07.2021 ರಂದು ಕೃತ್ಯ ನಡೆದ ಸ್ಥಳದ ಮಾಲೀಕತ್ವ ಕೋರಿ ಕಣ್ಣೂರು ಗ್ರಾಮಪಂಚಾಯ್ತಿ ಪಿಡಿಒ ರವರಿಗೆ ಅರ್ಜಿಯನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ಸದರಿ ಅರ್ಜಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರಧಿಯನ್ನ ನಿಪಿ-12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ದಿನಾಂಕ 27.07.2021 ರಂದು ರಾಸಾಯಕ ಪರೀಕ್ಷೆಗಾಗಿ ಚಾಸಾ 7 ರವರಿಂದ ಕಳುಹಿಸಿಕೊಟ್ಟಿರುತ್ತೇನೆ. ಆರೋಪಿಯು ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣ ಜಾಮೀನು ಪಡೆದುಕೊಂಡು ಹಾಜರಾದ ಮೇರೆಗೆ ವಿಚಾರಣೆ ಮಾಡಿ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 13.08.2021 ರಂದು ರಾಸಾಯಕ ಪರೀಕ್ಷಾ ವರಧಿಯನ್ನು ಸ್ವೀಕರಿಸಿರುತ್ತೇನೆ. ಈಗ ಸಾಕ್ಷಿಗೆ ಸದರಿ ರಾಸಾಯನಿಕ ಪರೀಕ್ಷಾ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರಧಿಯನ್ನ ನಿಪಿ-13 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಜಪ್ತಿ ಪಡಿಸಿದ ಮದ್ಯದ ಮಾಲುಗಳಲ್ಲಿ ಆಕ್ಕೋಹಾಲ್ ಅಂಶ ಇರುವುದು ಕಂಡುಬಂದಿರುತ್ತದೆ.

ದಿನಾಂಕ 23.09.2021 ರಂದು ಕಣ್ಣೂರು ಗ್ರಾಮ ಪಂಚಾಯ್ತಿವರು ವರಧಿಯನ್ನು ನೀಡಿರುತ್ತಾರೆ. ಸದರಿ ವರಧಿ ಯಲ್ಲಿ ನಿಖರವಾದ ಮಾಹಿತಿ ಲಭ್ಯ ಇರುವುದಿಲ್ಲ ಆದರೆ ಸದರಿ ಅಂಗಡಿಯಲ್ಲಿ ಆರೋಪಿಯು ವ್ಯಾಪಾರ ನಡೆಸುತ್ತಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಈಗ ಸಾಕ್ಷಿಗೆ ಸದರಿ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರಧಿಯನ್ನ ನಿಪಿ-14 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ತನಿಖೆ ಮುಕ್ತಾಯಗೊಂಡಿದ್ದರಿಂದ ಆರೋಪಿಯ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರಧಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್ ಜಿ ಯು ವಕೀಲರಿಂದಃ**

ತನಿಖೆಯ ಸಮಯದಲ್ಲಿ ಮಾಹಿತಿಯು ಪೋನಿನ ಮುಖಾಂತರ ಬಂದಿರುತ್ತದೆಯೋ ಅಥವಾ ಲಿಖಿತವಾಗಿ ಬಂದಿರುತ್ತದೆಯೋ ಎಂದು ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಅಲ್ಲಿನ ಸುತ್ತಮುತ್ತ ಗ್ರಾಮಸ್ಥರೇ ಮಾಹಿತಿ ನೀಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರ ಬಗ್ಗೆ ಪ್ರಥಮ ವರ್ತಮಾನ ವರಧಿ ದಾಖಲಿಸಿದ ಅಧಿಕಾರಿಯನ್ನು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನಾನು ಗ್ರಾಮಪಂಚಾಯ್ತಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಂಗಡಿಯು ತುಮಕೂರು ಜಿಲ್ಲಾ ವ್ಯಾಪ್ತಿಗೆ ಬರುತ್ತದೆ ಎಂದು ವರಧಿ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಸದರಿ ಅಂಗಡಿಯನ್ನು ನಡೆಸುತ್ತಿದ್ದಾರೆ ಎಂದು ಅಕ್ಕಪಕ್ಕದವರನ್ನು ಕೇಳಿ ಮಾಹಿತಿ ಪಡೆಯಲು ತೊಂದರೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅಂಗಡಿಯು ಆರೋಪಿಗೆ ಸಂಬಂಧ ಪಟ್ಟಿದ್ದಲ್ಲ ಹಾಗೂ ನೀವು ಸ್ದಳಕ್ಕೆ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ಆರೋಪಿಯ ಅಂಗಡಿ ಇದೆ ಎಂದು ನೀವು ಗ್ರಾಮಪಂಚಾಯ್ತಿಯವರಿಗೆ ಮಾಹಿತಿ ಕೊಟ್ಟು ವರಧಿ ಪಡೆದಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ದಕ್ಷಿಣ ಭಾಗಕ್ಕೆ ಸುಗ್ಗನಹಳ್ಳಿ ಗ್ರಾಮ ಇದೆ ಎಂದರೆ ಸಾಕ್ಷಿ ನಾನು ಸ್ಥ,ಳವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸ್ದಳಕ್ಕೆ ಹೋಗಿದ್ದರೆ ಹಾಗೂ ಗ್ರಾಮಸ್ಥರ ವಿಚಾರಣೆ ಮಾಡಿದ್ದರೆ ಸದರಿ ಅಂಗಡಿಯು ಆರೋಪಿಯದ್ದು ಅಲ್ಲ ಎಂದು ತನಿಮ್ಮ ಗಮನಕ್ಕೆ ಬರುತ್ತಿತ್ತು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಠಾಣಾ ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ದ ಸುಳ್ಳು ಆರೋಪ ಮಾಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಅಧಿಕಾರಿ ಸುಳ್ಳು ಮಾಹಿತಿ ಪಡೆದು ದೂರನ್ನು ದಾಖಲಿಸಿಕೊಂಡಿದ್ದು ನೀವು ಸರಿಯಾಗಿ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ . ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**